ಆ) ಪ್ರಸ್ತಾವನೆಗಳು ಬಂದರೆ ನಿಯಮಾನುಸಾರ ಪರಿಶೀಲಿಸಲಾಗುವುದು. ಸಧ್ಯದಲ್ಲಿ ಉತ್ತರ ಕನ್ನಡ ಜಿಲ್ಲೆಯ ಯಾವ ಪ್ರಸ್ತಾವನೆಗಳೂ ಸರ್ಕಾರಕ್ಕೆ ಬಂದಿರುವುದಿಲ್ಲ.

ಡೆನಿಡಾ ವಾಟರ್ ಶೆಡ್ ಯೋಜನೆ ಬಗ್ಗೆ

೨೩೩೪. ಶ್ರೀ ಚಂದ್ರಶೇಖರ ಮಾಮ ನಿ(ಪರಸಗಡ).—ಮಾನ್ಯ ಕಂದಾಯ ಮತ್ತು ಯೋಜನೆ ಹಾಗೂ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಡೆನಿಡಾ ವಾಟರ್ ಶೆಡ್ ಯೋಜನೆಯ ಕೆಳಗೆ ಇನಾಮು ಹೊಂಗಲ್ ವಾಟರ್ ಸೀಡ್ ಪ್ರೊಗ್ರಾಮಿನ ಕೆಲಸವನ್ನು ಪ್ರಾರಂಭಿಸಿರುವ ವಿಚಾರ ಸರ್ಕಾರದ ಗಮನದಲ್ಲಿಯೇ, ಹಾಗಿದ್ದಲ್ಲಿ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು ?

ಆ) ಡ್ಯಾನಿಡಾ ವಾಟರ್ ಸೀಡ್ ಯೋಜನೆಯ ಕೆಳಗೆ ಮಂರಗಣಸಿ ವಾಟರ್ ಶೆಡ್ ಪ್ರೊಗ್ರಾಮಿನ ಕೆಲಸವನ್ನು ಪ್ರಾರಂಭಿಸುವ ವಿಚಾರ ಸರ್ಕಾರದ ಗಮನದಲ್ಲಿದೆಯೇ, ಹಾಗಿದ್ದಲ್ಲಿ, ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು ?

ಇ) ಗೊರಗುದ್ದಿ ಲೊನಿಸಲ್ ವಾಟರ್ ಶೆಡ್ ಪ್ರೋಗ್ರಾಮಿನ ಕೆಲಸವನ್ನು ಪ್ರಾರಂಭಿಸುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು. ಈ ಮೇಲಿನ ಯೋಜನೆಗಳಿಗೆ ತಗಲುವ ಅಂದಾಜು, ಪೆಚ್ಚಪೆಷ್ಟು, ಇವುಗಳಿಗೆ ಈಗಾಗಲೇ ಬಿಡುಗಡೆ ಮಾಡಿರುವ ಹಣವೆಷ್ಟು ?

ಈ) ಸವದತ್ತಿ ತಾಲ್ಲೂಕಿನ ಪೆಚ್ಚುವರಿ ರಾಷ್ಟ್ರೀಯ ಜಲಾನಯನ ಅಭಿವೃದ್ಧಿಯಡಿಯಲ್ಲಿ ಗುಡ್ನಾಳ್, ಯಂಡವಳ್ಳಿ ಹಾಗೂ ಯರಗಣವಿ ಜಲಾನಯನ ಕೆಲಸವನ್ನು ಪ್ರಾರಂಭಿಸುವ ವಿಚಾರ ಸರ್ಕಾರದವರ ಮುಂದಿದೆಯೇ. ಹಾಗಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನೆ ಹಾಗೂ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು).—

ಅ) ಹೌದು, ಡ್ಯಾನಿಡಾ ಮತ್ತು ಕೇಂದ್ರ ಸರ್ಕಾರದ ಅನುಮೋದನೆ ದೊರತ ನಂತರ ಕೆಲಸವನ್ನು ಪ್ರಾರಂಭಿಸಲಾಗುವುದು.

ಆ) ಇಲ್ಲಾ.
ಇ) ಇಲ್ಲಾ.
ಈ) ಇಲ್ಲಾ.

ರಾಜ್ಯದ ನೀರಾವರಿ ಯೋಜನೆ ಬಗ್ಗೆ

೨೩೩೭. ಶ್ರೀ ಶರಣಬಸಪ್ಪಮಾಲಿ ಪಾಟೀಲ್ (ಆಳಂದ್).—ಮಾನ್ಯ ಕಂದಾಯ ಹಾಗೂ ಯೋಜನೆ ಮತ್ತು ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಒಂದು ಕೋಟಿ ರೂಪಾಯಿಗಿಂತಲೂ ಹೆಚ್ಚಿನ ಹಣ ಖರ್ಚು ಮಾಡಿರುವ ನೀರಾವರಿ ಯೋಜನೆಗಳೆಷ್ಟು ?

ಆ) ಯೋಜನೆಯ ಹೆಸರುಗಳೇನು ಮತ್ತು ಅವುಗಳಲ್ಲಿ ೧೯೮೬-೮೭ನೇ ಸಾಲಿನಲ್ಲಿ ಗೊತ್ತು ಪಡಿಸಿದ ಹಣವೆಷ್ಟು, ಹಾಗೂ ಖರ್ಚಾದ ಹಣದ ವೊತ್ತವೆಷ್ಟು ?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಮತ್ತು ನೀರಾವರಿ ಮಂತ್ರಿಗಳು).—

ಅ) ೫೧ ಯೋಜನೆಗಳು (ನಿರ್ಮಾಣ ಹಂತದಲ್ಲಿರುವುವು).

ಆ) ವಿವರಗಳನ್ನು ಲಗತ್ತಿಸಲಾಗಿರುವ ಪಟ್ಟಿಯ ಲ್ಲಿ ನೀಡಲಾಗಿದೆ.